(7)

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ನಗರ, ವಲಯ, ಬೆಳಗಾವಿ

ಸಂಖ್ಯೆ ಇ-4/ಖಾಪ್ರಾಶಾ:ಮಾನ್ಯತೆ:.12-:2011-12 11674 ದಿನಾಂಕ 09-12-2011

-: ಜ್ಞಾಪನ :-

Annexure -

ವಿಷಯ: ಜೋಶಿಜ್ ಸೆಂಟ್ರಲ್ ಪಬ್ಲಿಕ ಅನುದಾನ ರಹಿತ ಹಿರಿಯ ಪ್ರಾಥಮಿಕ ಶಾಲೆ ಮಂಡೋಳಿ ರೋಡ ಬೆಳಗಾವಿ ಶಾಲೆಗೆ ಮನ್ನಣೆ ನೀಡುವ ಕುರಿತು

ಉಲ್ಲೇಖ:1)ಮಾನ್ಯ ಆಯುಕ್ತರು ಸಾ.ಶಿ.ಇ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ಸಿ೮(೮) ಶಾ.ಸಿ.ಅ-10/ಕ ವಿಭಾಗ-01-02 ದಿ: 17-8-2002

2)ಮಾನ್ಯ ಉ.ನಿ.ಬೆಳಗಾವಿ ಅವರ ಪತ್ರ ಸಂಖ್ಯೆ ಮಾ.ನಿ-ವಿ.ಪ-227-02-03-386-ದಿ 6-2-2003

3)ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ ಬೆಂಗಳೂರು ಇವರ ಪತ್ರ ಸಂ:ಇಡಿ:ವಿವಿಧ:2005 ದಿನಾಂಕ: 20-9-2011

4) ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ಇವರ ಪತ್ರ ಸಂಖ್ಯೆ:ಜಿ1/ಖಾಅರಪ್ರಾಶಾ/1ನೇತನು/22/2008-09 ದಿನಾಂಕ; 27-05-2008

5) ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಇವರ ಪತ್ರ ಸಂಖ್ಯೆ; ಜಿ5/ಶಾಶಿಅ;ಹೊಹಿ;ಪ್ರಾಶಾ;ಅನು;82;2009-10 ದಿನಾಂಕ; 04-03-2010

6)ಮುಖ್ಯೋಪಾಧ್ಯಾಯರು ಜೋಶಿಜ್ ಸೆಂಟ್ರಲ್ ಪಬ್ಲಿಕ ಅನುದಾನ ರಹಿತ ಹಿರಿಯ ಪ್ರಾಥಮಿಕ ಶಾಲೆ ಮಂಡೋಳಿ ರೋಡ ಬೆಳಗಾವಿ ಅವರ ಪತ್ರ ಸಂ: ದಿ: 21-10-2011 ಮತ್ತು 17-11-2011

7) ಸದರ ಶಾಲೆಗೆ ಸಂದರ್ಶನ/ತಪಾಸಣಾ ವರದಿ ಸಲ್ಲಿಸಿದ ದಿನಾಂಕ: 11-11-2011

ಉಲ್ಲೇಖ 4 ರನ್ವಯ ಮುಖ್ಯಾಧ್ಯಾಪಕರು ಸಲ್ಲಿಸಿದ ಪ್ರಸ್ತಾವನೆಯನ್ನು ಉಲ್ಲೇಖಿತ ಸರಕಾರದ ಆದೇಶ ಹಾಗೂ ಆಯುಕ್ತರ ಸುತ್ತೋಲೆಗಳನ್ವಯ ಪರಿಶೀಲಿಸಿ, ಜೋಶಿಸ್ ಸೆಂಟ್ರಲ್ ಪಬ್ಲಿಕ್ ಸ್ಕೂಲ್ ಮಂಡೋಳಿ ರಸ್ತೆ ಬೆಳಗಾವಿ ಈ ಶಾಲೆಯ ಮನ್ನಣೆ ಕುರಿತಾದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಶಿಕ್ಷಣ ಕಾಯ್ದೆಯಂತೆ ರಚಿಸಲಾಗಿರುವ ಹಾಗೂ 1999 ರ ಮನ್ನಣೆ ನಿಯಮಗಳನ್ವಯ ಸನ್ 2008-09 ನೇ ಸಾಲಿಗೆ 1 ರಿಂದ 5 ನೇ ತರಗತಿಯನ್ನು ಪ್ರಾರಂಭಿಸಿರುವುದರಿಂದ ಹಾಗೂ 2009-10 ರಲ್ಲಿ ಪತ್ರ ಸಂ:ಇ-4:ಖಾಪ್ರಾಶಾ:ಮನ್ನಣೆ/2009-10 ದಿನಾಂಕ: 16-2-2010 ರಂತೆ ಪ್ರಥಮ ಮನ್ನಣೆ ನೀಡಿರುವ ಹಿನ್ನೆಲೆಯಲ್ಲಿ ಮತ್ತು ಉಲ್ಲೇಖ 5 ಪತ್ರದಂತೆ ಸದರಿ ಶಾಲೆಗೆ 6 ಮತ್ತು 7 ನೇ ತರಗತಿಗೆ ಆಂಗ್ಲ ಮಾಧ್ಯಮದಲ್ಲಿ ಅನುಮತಿಸಿರುವದರಿಂದ ಪ್ರಸ್ತುತ ಈಗ ಈ ಕೆಳಗೆ ಕಾಣಿಸಿದ ತರಗತಿಗಳಿಗೆ ಕೆಳಗೆ ನಮೂದಿಸಿದ ಷರತ್ತುಗಳಿಗೊಳಪಟ್ಟು ಕರ್ನಾಟಕ ಶಿಕ್ಷಣ ಮಸೂದೆ ನಿಯಮ 3 ರನ್ವಯ ಶಾಶ್ವತ ಅನುದಾನ ರಹಿತವಾಗಿ ತಾತ್ಕಾಲಿಕವಾಗಿ ಮನ್ನಣೆಯನ್ನು ನೀಡಲಾಗಿದೆ.

| ತರಗತಿಗಳು | ಮಾಧ್ಯಮ | ಅನುಮೋದಿಸಲ್ಪಟ್ಟ ವಿಭಾಗಗಳು | | | | ಶರಾ |
|---|---|---|---|---|---|---|
| | | ಕನ್ನಡ | ಉರ್ದು | ಆಂಗ್ಲ | ಒಟ್ಟು | |
| 1 | ಕನ್ನಡ | 01 | - | - | 01 | 2009-10 ರಿಂದ 2013-14 ನೇ ಸಾಲಿಗಾಗಿ ಶಾಶ್ವತ ಅನುದಾನ ರಹಿತವಾಗಿ ಮನ್ನಣೆ ನೀಡಲಾಗಿದೆ. |
| 2 | ಕನ್ನಡ | 01 | - | - | 01 | |
| 3 | ಕನ್ನಡ | 01 | - | - | 01 | |
| 4 | ಕನ್ನಡ | 01 | - | - | 01 | |
| 5 | ಕನ್ನಡ | 01 | - | - | 01 | |
| 6 | ಆಂಗ್ಲ | 0 | - | 01 | 01 | |
| 7 | ಆಂಗ್ಲ | 0 | - | 01 | 01 | |
| | ಒಟ್ಟು | 05 | - | 02 | 07 | |

ಷರತ್ತುಗಳು

1) ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ನಿಯಮಗಳಿಗೆ ಅನುಗುಣವಾಗಿ ಸುಸಜ್ಜಿತವಾದ ಹಾಗೂ ಸ್ವಂತ ಇಮಾರತಿ.,ಆಟದ ಮೈದಾನ.ಪಾಠೋಪಕರಣ ಮತ್ತು ಪೀಠೋಪಕರಣ ಆಡಳಿತ ಮಂಡಳಿಯವರು ಶಾಲೆಗೆ ಪೂರೈಸಿರತಕ್ಕದ್ದು.

2) ಶಾಲೆಯಲ್ಲಿ ಅವಶ್ಯಕ ವಿದ್ಯಾರ್ಹತೆ ಹೊಂದಿದ ಅರ್ಹ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವದು.

4) ಇಲಾಖೆಯಿಂದ ಮಾನ್ಯತೆಯನ್ನು ನಿಗದಿತ ಅವಧಿಯಲ್ಲಿ ಪಡೆಯತಕ್ಕದ್ದು

5) ಶಾಲೆಯ ವಾರ್ಷಿಕ ತಪಾಸನೆಯನ್ನು ಪ್ರತಿ ವರ್ಷ ತಪ್ಪದೆ ಇಲಾಖಾ ಅಧಿಕಾರಿಗಳಿಂದ ಮಾಡಿಸಿಕೊಳ್ಳುವದು ಹಾಗೂ ಪಾಲನಾ ವರದಿಯನ್ನು ಸಕಾಲಕ್ಕೆ ಒಪ್ಪಿಸತಕ್ಕದ್ದು.

6) ಶಾಲೆಯ ಪ್ರತಿ ಸಾಲಿನ ಲೆಕ್ಕಪತ್ರ ಗಳನ್ನು ಅಧಿಕೃತ ಚಾರ್ಟಡ್ ಅಕೌಂಟಂಟ್‌ರವರಿಂದ ತಪಾಸಣೆ ಮಾಡಿ ವರದಿ ನೀಡುವುದು

7) ವಿದ್ಯಾರ್ಥಿಗಳ ಶುಲ್ಕವನ್ನು ಶಿಕ್ಷಣ ಕಾಯ್ದೆಯಂತೆ ರಚಿಸಲಾದ ನಿಯಮಗಳಲ್ಲಿ ನಿಗದಿಪಡಿಸಿದಂತೆ ವಸೂಲು ಮಾಡತಕ್ಕದ್ದು.ಮತ್ತು ಸರ್ಕಾರಕ್ಕೆ ಕಟ್ಟಬೇಕಾದ ಶುಲ್ಕವನ್ನು ನಿಗದಿತ ಅವಧಿಯೊಳಗೆ ತುಂಬತಕ್ಕದ್ದು.

8) ಇಲಾಖೆಯಿಂದ ನಿಗದಿ ಪಡಿಸಿದ ಪಠ್ಯ ಕ್ರಮವನ್ನು ಅನುಸರಿಸತಕ್ಕದ್ದು.

9) ವಿದ್ಯಾರ್ಥಿಗಳ ದಾಖಲಾತಿ ಹಾಗೂ ಹಾಜರಾತಿ ಸಂಖ್ಯೆಯನ್ನು ಗಮನಾರ್ಹವಾಗಿ ಹೆಚ್ಚಿಸತಕ್ಕದ್ದು.

10) ಆಡಳಿತ ಮಂಡಳಿಯ ಪಿ.ಟಿ.ಆರ್. ನವೀಕರಣ ಮಾಡಿಕೊಂಡು ಸದಸ್ಯರ ಪಟ್ಟಿ ಸಲ್ಲಿಸತಕ್ಕದ್ದು.

PRINCIPAL
Joshi's Central Public School
Belgaum

11)ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ ನಿಯಮಗಳನ್ನು ಹಾಗೂ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶಗಳನ್ನು ತಪ್ಪದೇ ಪಾಲಿಸತಕ್ಕದ್ದು.

12)ಸಿಬ್ಬಂದಿಗಳಿಗೆ ಕನಿಷ್ಠ ವೇತನವನ್ನು ಬ್ಯಾಂಕ ಮೂಲಕ ನೀಡತಕ್ಕದ್ದು ಹಾಗೂ ಅವರ ಸೇವಾ ಬದ್ರತೆಗಾಗಿ ಸೇವಾ ಪುಸ್ತಕವನ್ನು ತೆರೆದಿಡತಕ್ಕದ್ದು.ಹಾಗೂ ಇತರ ಎಲ್ಲಾ ಸೌಲಬ್ಯಗಳನ್ನು ಪೂರೈಸತಕ್ಕದ್ದು. ಮತ್ತು ನಿಗದಿಪಡಿಸಿದ ವಿದ್ಯಾರ್ಹತೆಯ ಅಬ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳತಕ್ಕದ್ದು.

13)ಸರ್ಕಾರದ ನಿಯಮದಂತೆ ಅಗ್ನಿ ಶಾಮಕ ಯಂತ್ರ ಅಳವಡಿಸುವದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ನಗರ ವಲಯ ಬೆಳಗಾವಿ

ಗೆ,
ಮುಖ್ಯೋಪಾಧ್ಯಾಯರು
ಜೋಶಿಸ್ ಪಬ್ಲಿಕ್ ಸ್ಕೂಲ್ ಘಂಡೋಳಿ ರಸ್ತೆ
ಬೆಳಗಾವಿ

PRINCIPAL
Joshi's Central Public School
Belgaum

Rajashree R Joshi

Digitally signed by Rajashree R Joshi
Date: 2022.06.18 11:03:07 +05'30'